ಉ) ಹಾಗಿದ್ದಲ್ಲಿ, ಸರ್ಕಾರದವರು ಕೂಡಲೇ ಈ ಹಣ ಬಿಡುಗಡೆ ಮಾಡಿ ಮನೆ ನಿರ್ಮಾಣ ಕಾರ್ಯವನ್ನು ಮುಂದುವರಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಗೋಪಿನಾಥ ಆರ್. ಸಾಂಡ್ರಾ

(ವಸತಿ ಸಚಿವರು)

-ಇಲ್ಲ-

-ಉದ್ಭವಿಸುವುದಿಲ್ಲ-

-ಉದ್ಭವಿಸುವುದಿಲ್ಲ-

-ಉದ್ಭವಿಸುವುದಿಲ್ಲ-

-ಉದ್ಭವಿಸುವುದಿಲ್ಲ

ವಿಷಯ :- ಮೈಸೂರು ನಗರದ ಕೆ.ಆರ್.ಮಿಲ್ ಪುನರಾರಂಭಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 161(83)

ಶ್ರೀ ಜಿ.ಪುಟ್ಟಸ್ವಾಮಿಗೌಡ(ಹೊಳೇನರಸೀಪುರ)

ಮಾನ್ಯ ಜವಳಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದ ಕೆ.ಆರ್.ಮಿಲ್ ಪುನರಾರಂಭಿಸಲು ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿರುವರೇ?

ಆ) ವಿವರಗಳನ್ನು ತಿಳಿಸುವುದು

ಇ) ಈ ಘಟಕವು ಯಾವಾಗ ಪುನರಾರಂಭವಾಗುವುದು?

ಶ್ರೀ ಹೆಚ್. ಕೆ.ಪಾಟೀಲ್

(ಜವಳಿ ರಾಜ್ಯ ಸಚಿವರು)

ಬಿ.ಐ.ಎಫ್.ಆರ್.ರವರು ಕೆ.ಆರ್.ಮಿಲ್ಲನ್ನು ಮುಚ್ಚಬೇಕೆಂದು ಆದೇಶ ನೀಡಿದ್ದಾರೆ. ಕೆ.ಆರ್.ಮಿಲ್ಲನ್ನು ಪುನಶ್ಚೇತನಗೊಳಿಸುವ ಬಗ್ಗೆ ಮನವಿಗಳು ಬಂದ ಮೇಲೆ ಸರ್ಕಾರವು ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಕೆ.ಆರ್. ಮಿಲ್ಲನ್ನು ಪುನಶ್ಚೇತನಗೊಳಿಸುವ ಸಾಧ್ಯತೆ ಬಗ್ಗೆ ಅಧ್ಯಯನ ಮಾಡಿ ಸಲಹೆ ಮತ್ತು ಅಳವಡಿಸಬೇಕಾದ ಕಾರ್ಯ ವಿಧಾನಗಳ ಬಗ್ಗೆ ವರದಿ ನೀಡಬೇಕೆಂದು ಸೂಚಿಸಲಾಗಿದೆ.

ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ.

ವಿಷಯ :- ಕರ್ನಾಟಕ ಅಲ್ಪಸಂಖ್ಯಾತರ ಆಯೋಗವು ಸರ್ಕಾರಕ್ಕೆ ಕಳೆದ ಮೂರು ವರ್ಷಗಳಿಂದ ಸಲ್ಲಿಸಿರುವ ಶಿಫಾರಸ್ಸುಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 162(422)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ)

ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕದ ಅಲ್ಪಸಂಖ್ಯಾತರ ಆಯೋಗವು ಸರ್ಕಾರಕ್ಕೆ ಕಳೆದ ಮೂರು ವರ್ಷಗಳಿಂದ ಸಲ್ಲಿಸಿರುವ ಶಿಫಾರಸ್ಸುಗಳ ಸಂಖ್ಯೆ ಎಷ್ಟು? (ವರ್ಷವಾರು ವಿವರಗಳನ್ನು ಒದಗಿಸುವುದು)

ಆ) ಇಲ್ಲಿಯವರೆವಿಗೆ ಒಪ್ಪಿಕೊಂಡು ಮತ್ತು ಜಾರಿಗೊಳಿಸಿರುವ ಶಿಫಾರಸ್ಸುಗಳ ಸಂಖ್ಯೆ ಎಷ್ಟು; (ಮೂರು ವರ್ಷಗಳಿಂದ ಈಚೆಗಿನ ವಿವರಗಳನ್ನು ಒದಗಿಸುವುದು);

ಇ) ಸರ್ಕಾರದಿಂದ ತಿರಸ್ಕರಿಸಲಾದ ಶಿಫಾರಸ್ಸುಗಳ ಸಂಖ್ಯೆ ಮತ್ತು ಅದಕ್ಕೆ ಕಾರಣಗಳು

ಶ್ರೀ ಎಂ. ವೀರಪ್ಪಮೊಯಿಲಿ

(ಮುಖ್ಯಮಂತ್ರಿಗಳು)

ಇಲ್ಲ

"ಆ" ನಲ್ಲಿ ಒದಗಿಸಿದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

-ಅದೇ-

ವಿಷಯ:- ರೈತರಿಗೆ ಮೊಟ್ಟೆ ಸರಬರಾಜು ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 163(425)

ಶ್ರೀ ಸಾದತ್ ಆಲಿಖಾನ್(ಚನ್ನಪಟ್ಟಣ)

ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ರೈತರಿಗೆ ಮೊಟ್ಟೆಯು ದೊರೆಯುವ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಉತ್ತಮ ತಳಿಯ ಮೊಟ್ಟೆಯನ್ನು ಸಕಾಲದಲ್ಲಿ ರೈತರಿಗೆ ಸರಬರಾಜು ಮಾಡಲು ಕೈಗೊಂಡಿರುವ ಕ್ರಮಗಳೇನು?

ಇ) ರೇಷ್ಮೆ ಗೂಡನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುವುದನ್ನು ತಡೆಗಟ್ಟಲು ತೆಗೆದುಕೊಂಡಿರುವ ಕ್ರಮಗಳೇನು?

ಡಾ. ಜಿ.ಪರಮೇಶ್ವರ

(ರೇಷ್ಮೆ ರಾಜ್ಯ ಸಚಿವರು)

ಇಲ್ಲ.

1. 85 ಸರ್ಕಾರಿ ಬಿತ್ತನೆ ಕೋಠಿಗಳನ್ನು ರಾಜ್ಯದ ಎಲ್ಲಾ ಸ್ಥಳಗಳಲ್ಲಿ ಸ್ಥಾಪಿಸಿ ರೇಷ್ಮೆ ಬಿತ್ತನೆ ಮೊಟ್ಟೆಯನ್ನು ತಯಾರಿಸಲಾಗುತ್ತಿದೆ.

2. ಕೇಂದ್ರ ರೇಷ್ಮೆ ಮಂಡಳಿಯ 7 ಬಿತ್ತನೆ ಕೋಠಿಗಳನ್ನು ಸ್ಥಾಪಿಸಿ ಬಿತ್ತನೆ ಮೊಟ್ಟೆಯನ್ನು ತಯಾರಿಸಲಾಗುತ್ತಿದೆ.

3. 764 ಖಾಸಗಿ ಬಿತ್ತನೆ ಕೋಠಿಗಳಿಗೆ ಪರವಾನಗಿ ಕೊಡಲಾಗಿದ್ದು ಅವರೂ ಸಹ ಬಿತ್ತನೆ ಮೊಟ್ಟೆ ತಯಾರು ಮಾಡುವುದರಲ್ಲಿ ತೊಡಗಿದ್ದಾರೆ.

ರೇಷ್ಮೆ ಗೂಡು ಮಾರಾಟ ಮಾಡತಕ್ಕ ರೈತರಿಗೆ ಸರ್ಕಾರಿ ಮಾರುಕಟ್ಟೆಗಳಲ್ಲಿ ಗೂಡಿನ ಗುಣಮಟ್ಟಕ್ಕೆ ತಕ್ಕ ಬೆಲೆ, ಸರಿಯಾದ ತೂಕ, ತಕ್ಷಣದ ಹಣ ಪಾವತಿಯಾಗುತ್ತಿರುವುದರಿಂದ ಮಾರುಕಟ್ಟೆಯ ಹೊರಗೆ ವ್ಯವಹಾರಗಳು ನಡೆಯುವುದು ಬಹಳ ಅಪರೂಪ. ಆದರೂ ಸಹ, ಕೆಲವೊಮ್ಮೆ ಈ ರೀತಿಯ ವ್ಯವಹಾರಗಳು ಆಗುವವೆಂಬ ಶಂಕೆಯಿಂದ ಸ್ಥಳೀಯ ಅಧಿಕಾರಿಗಳು ಮತ್ತು ರೇಷ್ಮೆ ಇಲಾಖೆಯ ಕಾನೂನು ಜಾರಿ ವಿಭಾಗದವರು ಪಹರೆ ನಡೆಸುತ್ತಿದ್ದಾರೆ.